## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕಿನ ಯಡಕೋಲ (ಮುದುಕಿ ಚಿಕ್ಕನಹುಂಡಿ) ಮತ್ತು ಇತರೆ 36 ಗ್ರಾಮಗಳಿಗೆ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಟೆಂಡರ್‌ನ್ನು ಅನುಮೋದಿಸುವ ಕುರಿತು.

**ಓದಲಾಗಿದೆ:** ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 140 ಗ್ರಾನೀಸ(5)2013 ದಿ:23.10.2013.

--

**ಪೀಠಿಕೆ:**

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕಿನ ಯಡಕೋಲ (ಮುದುಕಿ ಚಿಕ್ಕನಹುಂಡಿ) ಮತ್ತು ಇತರೆ 36 ಗ್ರಾಮಗಳ ಕುಡಿಯುವ ನೀರು ಸರಬರಾಜು ಯೋಜನೆಗೆ ದಿನಾಂಕ:20.11.2012ರಂದು ನಡೆದ ರಾಜ್ಯ ಮಟ್ಟದ ಯೋಜನಾ ಮಂಜೂರಾತಿ ಸಮಿತಿ ಸಭೆಯಲ್ಲಿ (SLSSC) ತಾತ್ವಿಕ ಅನುಮೋದನೆ ದೊರಕಿರುತ್ತದೆ. ಈ ಯೋಜನೆಗೆ ಕಬಿನಿ ನದಿಯನ್ನು ಜಲಮೂಲವೆಂದು ಪರಿಗಣಿಸಿ, ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ರೂ.15.00ಕೋಟಿ ಅಂದಾಜು ಮೊತ್ತಕ್ಕೆ (5 ವರ್ಷಗಳ O&M ಮೊತ್ತ ಸೇರಿದಂತೆ) ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ತಾಂತ್ರಿಕ ಮಂಜೂರಾತಿ ನೀಡಲಾಗಿದೆ.

2. ಈ ಯೋಜನೆಯಡಿಯಲ್ಲಿ Intake Structure, ಕಚ್ಚಾ ನೀರಿನ ಏರು ಕೊಳವೆ ಮಾರ್ಗ, ಶುದ್ಧ ಕುಡಿಯುವ ನೀರಿನ ಸ್ಥಾವರ, ಶುದ್ಧ ಕುಡಿಯುವ ನೀರಿನ ಪಂಪಿನ ಮನೆ, ಶುದ್ಧ ಕುಡಿಯುವ ನೀರನ್ನು ತೆಗೆದುಕೊಂಡು ಹೋಗುವ ಮುಖ್ಯ ಕೊಳವೆಗಳು, ಸ್ಥಳೀಯ ನೀರೆತ್ತುವ ಪಂಪಿನ ಮನೆಗಳು, ಮಾಸ್ಟರ್ ಬ್ಯಾಲೆನ್ಸಿಂಗ್ ಜಲಾಶಯ (Master Balancing Reservoir), ಗುರುತ್ವಾಕರ್ಷಕ ಕೊಳವೆ ಮಾರ್ಗಗಳನ್ನು ಎಲ್ಲಾ ಜನವಸತಿಗಳಿಗೆ ಒದಗಿಸಲು ರೂಪಿಸಲಾಗಿದೆ. ಒಟ್ಟಾರೆ 37 ಗ್ರಾಮಗಳಿಗೆ ನೀರು ಸರಬರಾಜು ಮಾಡಲು ಉದ್ದೇಶಿಸಲಾಗಿದೆ.

3. ಉದ್ದೇಶಿತ ಯೋಜನೆಯನ್ನು 37 ಗ್ರಾಮಗಳಿಗೆ 2001 ಮತ್ತು 2011ರ ಅವಧಿಯ ಜನಗಣತಿ ಪ್ರಕಾರ 17% Rural Decadal Growth ಆಧರಿಸಿ 2012 (ಜನಸಂಖ್ಯೆ 40,003) ರಿಂದ ಮುಂದಿನ 30 ವರ್ಷಗಳಲ್ಲಿ 54,761 ಪ್ರಾಕ್ಷೇಪಿತ ಜನಸಂಖ್ಯೆಗೆ (2032ರ ಪ್ರಾಕ್ಷೇಪಿತ ಜನಸಂಖ್ಯೆಗೆ) 55ಎಲ್‌ಪಿಸಿಡಿ ಪ್ರಮಾಣದ ನೀರು ಸರಬರಾಜು ಮಾಡಲಾಗುವುದು. ಮುಂದಿನ ವರ್ಷಗಳಿಗೆ ಬೇಕಾಗುವ / ಒಟ್ಟು ನೀರಿನ ಬೇಡಿಕೆ (Gross Water Demand) 3.57 ಎಂ.ಎಲ್.ಡಿ (15% losses ಸೇರಿ) ಎಂದು ಅಂದಾಜಿಸಲಾಗಿದೆ. **ಈ ಯೋಜನೆಯು 5 ವರ್ಷಗಳ O&M ವೆಚ್ಚ ಸೇರಿದಂತೆ ರೂ.1899.65ಲಕ್ಷಗಳಿಗೆ ಪರಿಷ್ಕೃತಗೊಂಡಿದ್ದು, ಮೂಲ ಅಂದಾಜಿಗೆ ಹೋಲಿಸಿದಲ್ಲಿ ಹೆಚ್ಚುವರಿ ಶೇ.26.64 ಆಗುತ್ತದೆ.**

4. KTPP ನಿಯಮಗಳನುಸಾರ ಟೆಂಡರ್‌ಗಳನ್ನು ಅಹ್ವಾನಿಸಲಾಗಿದ್ದು, ಒಂದನೇ ಹಾಗೂ ಎರಡನೇ ಕರೆಗಳಿಗೆ ಯಾವುದೇ ಗುತ್ತಿಗೆದಾರರು ಪ್ರತಿಕ್ರಿಯಿಸಿರುವುದಿಲ್ಲ. ಮೂರು, ನಾಲ್ಕನೇ ಕರೆಯಲ್ಲಿ ಶೇ.(+)58.38%

ಹೆಚ್ಚಾಗಿದ್ದರಿಂದ ಟೆಂಡರ್‌ನ್ನು ರದ್ದುಪಡಿಸಲಾಗಿದೆ. ಐದನೇ ಬಾರಿ ಆಹ್ವಾನಿಸಲಾದ ಟೆಂಡರ್ ಇಂಡೆಂಟ್ ಸಂಖ್ಯೆ 03ರಲ್ಲಿ ತಾಂತ್ರಿಕ ಬಿಡ್‌ನಲ್ಲಿ ಅನರ್ಹರಾಗಿದ್ದರಿಂದ ಮರು ಟೆಂಡರ್ ಕರೆಯಲಾಗಿದೆ. ಮೇಲಿನ ಕರೆಗಳು ವಿಫಲವಾಗಿದ್ದರಿಂದ, 6ನೇ ಬಾರಿ ಅಹ್ವಾನಿಸಲಾದ ಅಲ್ಪಾವಧಿ ಟೆಂಡರ್ ಕರೆಗೆ ಏಕೈಕ ಗುತ್ತಿಗೆದಾರರಾದ ಶ್ರೀ ಹೇಮಂತ್ ಮಾಲೂ, ಮೆ. ಮಾಲೂ ಕನ್‌ಸ್ಟ್ರಕ್ಷನ್ಸ್ (ಇ) ಪ್ರೈ.ಲಿ., ಬೆಂಗಳೂರು, 1ನೇ ದರ್ಜೆರವರು ಭಾಗವಹಿಸಿರುತ್ತಾರೆ.

5. ದಿನಾಂಕ:08.08.2016ರಂದು ನಡೆದ ಟೆಂಡರ್ ಪರಿಶೀಲನಾ / ಪರಾಮರ್ಶೆ ಸಮಿತಿಯಲ್ಲಿ ಶಿಫಾರಸ್ಸು ಮಾಡಿರುವಂತೆ, ಟೆಂಡರ್‌ನಲ್ಲಿ ಭಾಗವಹಿಸಿದ್ದ ಏಕೈಕ ಗುತ್ತಿಗೆದಾರರ ದಾಖಲೆಗಳನ್ನು KW-4ನಿಯಮದಂತೆ ಪರಿಶೀಲಿಸಲಾಗಿ ಕ್ರಮಬದ್ಧವಾಗಿ ಸಲ್ಲಿಸಿರುವುದರಿಂದ, ಸದರಿ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆ ಕಾಮಗಾರಿ ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದ ಶ್ರೀ ಹೇಮಂತ್ ಮಾಲೂ, ಮೆ. ಮಾಲೂ ಕನ್‌ಸ್ಟ್ರಕ್ಷನ್ಸ್ (ಇ) ಪ್ರೈ.ಲಿ., ಬೆಂಗಳೂರು, 1ನೇ ದರ್ಜೆರವರ ನಮೂದಿತ ಟೆಂಡರ್ ಮೊತ್ತ ರೂ.1786.11ಲಕ್ಷಗಳಾಗಿದ್ದು, ಪ್ರಸ್ತುತ ಚಾಲ್ತಿಯಲ್ಲಿರುವ 2015-16ನೇ ಸಾಲಿನ ದರಪಟ್ಟಿ ದರಗಳಿಗೆ ತುಲನೆ ಮಾಡಿದಾಗ ಶೇ9.37% ಹೆಚ್ಚು ದರದ ಟೆಂಡರನ್ನು ಅನುಮೋದಿಸಲು ಸಮಿತಿಯು ಶಿಫಾರಸ್ಸು ಮಾಡಿದೆ.

6. ಈ ಹಿನ್ನೆಲೆಯಲ್ಲಿ ಬಿಡ್‌ದಾರರಾದ ಶ್ರೀ ಹೇಮಂತ್ ಮಾಲೂ, ಮೆ. ಮಾಲೂ ಕನ್‌ಸ್ಟ್ರಕ್ಷನ್ಸ್ (ಇ) ಪ್ರೈ.ಲಿ., ಬೆಂಗಳೂರು ರವರು ಪ್ರಸ್ತಾಪಿತ ಕಾಮಗಾರಿಯನ್ನು ರೂ.1786.11ಲಕ್ಷಗಳಲ್ಲಿ ಅನುಷ್ಠಾನ ಮಾಡಲು ಒಪ್ಪಿದ್ದು, ಸದರಿ ಮೊತ್ತಕ್ಕೆ ಅನುಮೋದನೆ ನೀಡಲು ಮುಖ್ಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆರವರು ಕಡತ ಸಂಖ್ಯೆ:ಗ್ರಾಅಪ 1142 ಗ್ರಾಕುನೀ&ನೈಇ 2016ರಲ್ಲಿ ಕೋರಿರುತ್ತಾರೆ. ಗುತ್ತಿಗೆದಾರರು ನಮೂದಿತ ಮೊತ್ತವಾದ ರೂ.1786.11ಲಕ್ಷಗಳಲ್ಲಿ 9.37% ಟೆಂಡರ್ ಪ್ರೀಮಿಯಂನೊಂದಿಗೆ ಸದರಿ ಪ್ರಸ್ತಾವನೆಯನ್ನು ಕೇಂದ್ರ ಪುರಸ್ಕೃತ NRDWP ಹಾಗೂ ರಾಜ್ಯ ವಲಯದ ಅನುದಾನದೊಂದಿಗೆ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಆದ್ದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 73 ಗ್ರಾನೀಸ(5)2016 ಬೆಂಗಳೂರು, ದಿನಾಂಕ:05.01.2017.**

ಪೀಠಿಕೆಯಲ್ಲಿನ ಪ್ರಸ್ತಾನೆಯನ್ನು ಪರಿಶೀಲಿಸಿ, ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕಿನ ಯಡಕೋಲ (ಮುದುಕಿ ಚಿಕ್ಕನಹುಂಡಿ) ಮತ್ತು ಇತರೆ 36 ಗ್ರಾಮಗಳಿಗೆ ಶಾಶ್ವತ ಮತ್ತು ಸುರಕ್ಷಿತ ಕುಡಿಯುವ ನೀರು ಪೂರೈಕೆ ವ್ಯವಸ್ಥೆ ಕಲ್ಪಿಸಲು ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗೆ **5 ವರ್ಷಗಳ O&M ವೆಚ್ಚ ಸೇರಿದಂತೆ ಪರಿಷ್ಕೃತ ಅಂದಾಜು ರೂ.1899.65ಲಕ್ಷ (ಸಾವಿರದ ಎಂಟುನೂರ ತೊಂಭತ್ತೊಂಭತ್ತು ಲಕ್ಷದ ಅರವತ್ತೈದು ಸಾವಿರ ರೂಪಾಯಿಗಳು ಮಾತ್ರ)**ಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಹಾಗೂ ಈ ಯೋಜನೆಯನ್ನು **ಶೇ.9.37 ಟೆಂಡರ್ ಪ್ರೀಮಿಯಂನೊಂದಿಗೆ ರೂ.1786.11ಲಕ್ಷ (ಸಾವಿರದ ಏಳುನೂರ ಎಂಭತ್ತಾರು ಲಕ್ಷದ ಹನ್ನೊಂದು ಸಾವಿರ ರೂಪಾಯಿಗಳು ಮಾತ್ರ)**ಗಳ ಮೊತ್ತದಲ್ಲಿ ಕೇಂದ್ರ ಪುರಸ್ಕೃತ NRDWP ಹಾಗೂ ರಾಜ್ಯ ವಲಯದಡಿ ಅನುಷ್ಠಾನಗೊಳಿಸಲು ಅನುಮೋದನೆ ನೀಡಲು ಸರ್ಕಾರವು ಹರ್ಷಿಸುತ್ತದೆ.

2. **ಈ ಆದೇಶವು ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ.**

a) ಸದರಿ ಟೆಂಡರ್‌ನ್ನು KTPP ಪಾರದರ್ಶಕ ನಿಯಮಗಳನ್ವಯ ಕ್ರಮವಹಿಸಲು ಸೂಚಿಸಲಾಗಿದೆ.

b) ಈ ಯೋಜನೆಯ ಅನುಷ್ಠಾನ ಮತ್ತು ಅನುದಾನ ವಿನಿಯೋಗದಲ್ಲಿ ಅನುಮೋದಿತ ಟೆಂಡರ್ ಮೊತ್ತ ಮೀರಿ ಹೆಚ್ಚಳವಾಗದಂತೆ ಅನುಷ್ಠಾನಾಧಿಕಾರಿಗಳು ನಿಗಾವಹಿಸಿ ಪ್ರಚಲಿತ ನಿಯಮಗಳನುಸಾರ ಅಗತ್ಯವಿರುವ ನಿಬಂಧನೆಗಳನ್ನು ಅಳವಡಿಸಿಕೊಂಡು ಸೂಕ್ತ ರೀತಿಯಲ್ಲಿ ಒಡಂಬಡಿಕೆ / ಕರಾರುಗಳನ್ನು ಮಾಡಿಕೊಳ್ಳತಕ್ಕದ್ದು.

c) ಯಶಸ್ವಿ ಗುತ್ತಿಗೆದಾರರು ಕಾಮಗಾರಿಯನ್ನು ಉತ್ತಮ ಗುಣಮಟ್ಟದಲ್ಲಿ ಮತ್ತು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಿ ಕಾರ್ಯಗತಗೊಳಿಸಬೇಕು ಹಾಗೂ ತದನಂತರ **5** ವರ್ಷಗಳ ಕಾಲ ಸದರಿ ಯೋಜನೆಯ ಸಂಪೂರ್ಣ ನಿರ್ವಹಣೆ ಹಾಗೂ ಕಾರ್ಯಾಚರಣೆ ಜವಾಬ್ದಾರಿಯನ್ನು (ವಿದ್ಯುತ್ ಶುಲ್ಕ ಹೊರತುಪಡಿಸಿ) ಸದರಿ ಸಂಸ್ಥೆಯೆ ನಿರ್ವಹಿಸತಕ್ಕದ್ದು.

d) ಕರಾರು ಪತ್ರದನ್ವಯ ಜನವಸತಿಗಳಿಗೆ ಕನಿಷ್ಠ 3.57 MLD ಶುದ್ಧ ಕುಡಿಯುವ ನೀರು ಪೂರೈಸಲು ಕ್ರಮವಹಿಸಬೇಕು ಮತ್ತು 55 LPCD ನೀರನ್ನು ಒದಗಿಸುವುದು. ಯಾವುದೇ ಕಾರಣಕ್ಕೂ ಅನುಮೋದಿತ ಯೋಜನಾ ಅಂದಾಜು ವೆಚ್ಚದಲ್ಲಿ ಹೆಚ್ಚಳವಾದಲ್ಲಿ ಸದರಿ ಗುತ್ತಿಗೆದಾರರೇ ಅಂತಹ ಹೆಚ್ಚಳ ಭರಿಸತಕ್ಕದ್ದು.

e) ಈ ಯೋಜನಾ ಕಾಮಗಾರಿಯನ್ನು 11 ತಿಂಗಳ ಕಾಲಮಿತಿಯೊಳಗೆ ಅನುಷ್ಠಾನಗೊಳಿಸತಕ್ಕದ್ದು. ಯಾವುದೇ ವಿಳಂಬಕ್ಕೆ ಅವಕಾಶವೀಯಕೂಡದು. ಯೋಜನೆಯ ಘಟಕದಲ್ಲಿನ ಸಾಮಗ್ರಿಗಳ ಬೆಲೆ ಹೆಚ್ಚಳಕ್ಕೆ ಅವಕಾಶವಿರುವುದಿಲ್ಲ. ಬಲ್ಕ್‌ವಾಟರ್ ಮೀಟರ್‌ಗಳನ್ನು ಎಲ್ಲಾ ಜನವಸತಿಗಳ OHT ಬಳಿ ಅಳವಡಿಸತಕ್ಕದ್ದು.

f) ಯೋಜನಾ ಅಂದಾಜು ಮೊತ್ತದ ಕನಿಷ್ಠ **10%**ನ್ನು ಸಂಸ್ಥೆಯು ಯೋಜನೆ ಕಾರ್ಯಗತಗೊಳಿಸಿ ತೃಪ್ತಿಕರ **O&M** ವ್ಯವಸ್ಥೆ ನಿರೂಪಿಸುವ ಕಾರ್ಯಕ್ಷಮತೆ ಆಧರಿಸಿ ನಂತರ ಪಾವತಿಸಬೇಕು.

g) ಈ ಯೋಜನೆಯಡಿಯಲ್ಲಿನ ಅಂದಾಜು ಘೋಷ್ವಾರೆಯಂತೆ ಮುಖ್ಯ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ ನಂತರ, ಅವುಗಳ ಗುಣಮಟ್ಟ ಮತ್ತು ಕಾರ್ಯಕ್ಷಮತೆ ಆಧರಿಸಿ ಅನುಮೋದಿತ **ToR** ಹಾಗೂ ಟೆಂಡರ್ ಕರಾರಿನಂತೆ ನಿಯಮಾನುಸಾರ ಬಿಲ್ ಪಾವತಿಸಲು ಅನುಷ್ಠಾನಾಧಿಕಾರಿಗಳು ಹಾಗೂ **CE/RDWSD** ಕ್ರಮವಹಿಸಬೇಕು. ಕಾಮಗಾರಿಯ ಕಾಲಕಾಲಿಕ ಪ್ರಗತಿ ಮತ್ತು ಗುಣಮಟ್ಟ ಪರಿಶೀಲಿಸಿ ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ವರದಿ ಮಾಡತಕ್ಕದ್ದು.

3. ಈ ಆದೇಶವನ್ನು ಆರ್ಥಿಕ ಇಲಾಖೆಯು ಕಡತದ ಟಿಪ್ಪಣಿ ಕಂಡಿಕೆ-255 ದಿನಾಂಕ:19.12.2016 ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ IFA ರವರು ಯೋಜನೆಗಳ ಮುಂದುವರಿಕೆಗೆ ಹೊರಡಿಸಿರುವ ಆದೇಶ ಸಂಖ್ಯೆ:ಗ್ರಾಅಪ 222 ಎಎಫ್‌ಎನ್ 2016, ದಿನಾಂಕ:01.04.2016ರ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ. ಕೃಷ್ಣಪ್ಪ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು-1) ಕರ್ನಾಟಕ, ಬೆಂಗಳೂರು.

3. ಮಹಾಲೇಖಪಾಲರು (ಎಯು–2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು–1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
8. ಬೆಂಗಳೂರು ವಿಶೇಷಾಧಿಕಾರಿ (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು–09
9. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
10. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 2ನೇ ಮಹಡಿ, ಕಾವೇರಿಭವನ, ಬೆಂಗಳೂರು–09.
11. ಮೈಸೂರು ಜಿಲ್ಲಾ ಪಂಚಾಯತ್ ಅಧ್ಯಕ್ಷರು.
12. ಮೈಸೂರು ಜಿಲ್ಲೆಯ ಜಿಲ್ಲಾಧಿಕಾರಿಗಳು.
13. ಮೈಸೂರು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ಮುಖ್ಯ ಲೆಕ್ಕಾಧಿಕಾರಿಗಳು.
14. ಅಧೀಕ್ಷಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತ, ಮೈಸೂರು.
15. ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು.
16. ಮುಖ್ಯ ಲೆಕ್ಕಾಧಿಕಾರಿಗಳು, RDWSD, ಕಾವೇರಿಭವನ, ಬೆಂಗಳೂರು–09.
17. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿ.
18. ಆಯುಕ್ತರು, RDWSD ಮತ್ತು ಪದನಿಮಿತ್ತ ಸರ್ಕಾರದ ಕಾರ್ಯದರ್ಶಿ / ಆಂತರಿಕ ಆರ್ಥಿಕ ಸಲಹೆಗಾರರು ಇವರುಗಳ ಆಪ್ತ ಸಹಾಯಕರು.
19. ಉಪ ನಿರ್ದೇಶಕರು, Network Management Center (TNMC), ನಂ.49, ಖನಿಜ ಭವನ, ರೇಸ್ ಕೋರ್ಸ ರಸ್ತೆ, ಬೆಂಗಳೂರು.
20. ಜಿಲ್ಲಾ ಖಜಾನಾಧಿಕಾರಿಗಳು ಮೈಸೂರು.
21. ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್, BWSSB ಬ್ರ್ಯಾಂಚ್, ರಾಜದೂತ್ ಕಾಂಪ್ಲೆಕ್ಸ್, ಅವೆನ್ಯೂ ರಸ್ತೆ, ಬೆಂಗಳೂರು.
22. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾಅಪಂ.ರಾಜ್ ಇಲಾಖೆ, ಬೆಂಗಳೂರು.
23. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾಅಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
24. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
25. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).
26. ಶಾಖಾ ರಕ್ಷಾ ಕಡತ ಹೆಚ್ಚುವರಿ ಪ್ರತಿಗಳು.